**ಸಿ.ಸಿ.7393/2023**
**ಪಿ.ಡಬ್ಲು-1/ನಾರಾಯಣಸ್ವಾಮಿ**

**ದಿ: 03.07.2026 ರಂದು ಪಿರ್ಯಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಆರೋಪಿ ಪರವಾಗಿ ಶ್ರೀಯುತ ಆರ್.ಎನ್., ವಕೀಲರಿಂದ.**

ನಾನು 10ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನಾನು ನಲಂಡಹಳ್ಳಿಯಲ್ಲಿ ವ್ಯವಸಾಯ ಮಾಡಿಕೊಂಡಿರುತ್ತೇನೆ. ಸಾಕ್ಷಿ ಸ್ವತಃ ಮುಂದುವರೆದು ಬಿಡುವಿನ ಸಮಯದಲ್ಲಿ ಆಟೋ ಚಲಾಯಿಸುತ್ತೇನೆ ಎಂದು ನುಡಿಯುತ್ತಾರೆ.

2. ನಮ್ಮ ಸಂಬಂಧಿಕರು ಆರೋಪಿ ಊರಿನಲ್ಲಿ ಇರುವುದರಿಂದ ಆರೋಪಿಯ ಪರಿಚಯವಾಗಿರುತ್ತದೆ. ಆ ರೀತಿ ಆರೋಪಿಯು 5-6 ವರ್ಷಗಳಿಂದ ಪರಿಚಯವಿರುತ್ತಾರೆ. ನನಗೆ ವ್ಯವಸಾಯದಿಂದ ವಾರ್ಷಿಕ 1-2 ಲಕ್ಷ ಆದಾಯವಿರುತ್ತದೆ. ಆ ರೀತಿ ನನಗೆ ವ್ಯವಸಾಯದಿಂದ ವಾರ್ಷಿಕ 1-2 ಲಕ್ಷ ಆದಾಯವಿರುತ್ತದೆ ಎಂದು ತೋರಿಸುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿಯು ನನ್ನ ಬಳಿ ಯಾವುದೇ ಹಣ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಜನವರಿ 2023ನೇ ಸಾಲಿನಲ್ಲಿ ಆರೋಪಿಗೆ ಹಣ ನೀಡಿರುತ್ತೇನೆ. ಆ ರೀತಿ ನಾನು ಆರೋಪಿಗೆ ನೀಡಿದ್ದೇನೆ ಎಂದು ಹೇಳುವ ಹಣ ನನ್ನ ಬಳಿ ಇತ್ತು ಎಂದು ತೋರಿಸುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ರೀತಿ ನಾನು ಆರೋಪಿಗೆ ನೀಡಿದ್ದೇನೆ ಎಂದು ಹೇಳುವ ಹಣ ನೀಡುವಷ್ಟು ನನ್ನ ಬಳಿ ಯಾವುದೇ ಹಣ ಇರುವುದಿಲ್ಲ ಮತ್ತು ಆರೋಪಿಯು ನನ್ನ ಬಳಿಯಿಂದ ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ನೀಡಿದ್ದೇನೆ ಎಂದು ಹೇಳುವ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ.

3. ನಾನು ಆರೋಪಿಗೆ ನೀಡಿದ್ದೇನೆ ಎಂದು ಹೇಳುವ ಹಣವನ್ನು ಹೊಸಕೋಟೆಯ ಬಸ್ಸು ನಿಲ್ದಾಣದಲ್ಲಿ ನೀಡಿರುತ್ತೇನೆ. ಆ ರೀತಿ ನಾನು ಆರೋಪಿಗೆ ಹಣ ನೀಡಿದ್ದೇನೆ ಎಂದು ಹೇಳುವ ಸಮಯದಲ್ಲಿ ನನ್ನ ಹೆಂಡತಿ ಹಾಜರಿದ್ದರು. ಸದರಿ ದಿನ ಆರೋಪಿಯು 3-4 ತಿಂಗಳಲ್ಲಿ ವಾಪಸ್ಸು ನೀಡುವುದಾಗಿ ಹೇಳಿ ಹಣ ಪಡೆದುಕೊಂಡಿದ್ದರು. ನಾನು ಆರೋಪಿಗೆ ಹಣ ನೀಡಿದ 4 ತಿಂಗಳ ನಂತರ ಆರೋಪಿಯ ಬಳಿ ಹಣ ವಾಪಸ್ಸು ನೀಡುವಂತೆ ಕಳಿರುತ್ತೇನೆ. ಆ ರೀತಿ ನಾನು ಆರೋಪಿಯ ಬಳಿ ಹಣ ವಾಪಸ್ಸು ನೀಡುವಂತೆ ಕೇಳಿದ್ದಾಗ ಆರೋಪಿಯು ಯಾವುದೇ ಹಣವನ್ನು ನೀಡಿರುವುದಿಲ್ಲ. ಆ ರೀತಿ ನಾನು 4 ತಿಂಗಳ ನಂತರ ಆರೋಪಿಯ ಬಳಿ ಹಣ ವಾಪಸ್ಸು ನೀಡುವಂತೆ ಕೇಳಿದ 15-20 ದಿನಗಳ ನಂತರ ಆರೋಪಿಯು ನಿಪಿ.1 ಚೆಕ್ಕನ್ನು ನೀಡಿರುತ್ತಾರೆ. ಜನವರಿ 2023ನೇ ಸಾಲಿನಲ್ಲಿ ಆರೋಪಿಯು ನಿಪಿ.1 ಚೆಕ್ಕನ್ನು ನೀಡಿರುತ್ತಾರೆ.

4. ನಿಪಿ.1 ರಲ್ಲಿರುವ ಬರವಣಿಗೆಯನ್ನು ಆರೋಪಿಯು ಬರೆದಿರುತ್ತಾರೆ. ನಿಪಿ.1 ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸುವ ಸಮಯದಲ್ಲಿ ಆರೋಪಿಗೆ ದೂರವಾಣಿ ಮೂಲಕ ತಿಳಿಸಿರುತ್ತೇನೆ. ನಿಪಿ.1 ಅಮಾನ್ಯಗೊಂಡ ಕುರಿತು ವಕೀಲರ ಮೂಲಕ ನೋಟಿಸ್ಸು ನೀಡಿ ಆರೋಪಿಗೆ ತಿಳಿಸಿರುತ್ತೇನೆ. ಆ ರೀತಿ ವಕೀಲರ ಮೂಲಕ ಆರೋಪಿಗೆ ನೀಡಿದ ನೋಟಿಸ್ಸು ಜಾರಿಯಾಗದೆ ವಾಪಸ್ಸು ಬಂದಿರುತ್ತದೆ. ಆರೋಪಿಯು ಯಾವುದೇ ಹಣ ಮರುಪಾವತಿ ಸಲುವಾಗಿ ಚೆಕ್ಕನ್ನು ನೀಡಿರುವುದಿಲ್ಲ ಮತ್ತು ನಾನು ಆರೋಪಿ ಬಳಿಯಿದ್ದ ನಿಪಿ.1 ಚೆಕ್ಕನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಆರೋಪಿ ಬಳಿಯಿದ್ದ ಚೆಕ್ಕನ್ನು ತೆಗೆದುಕೊಂಡು ಹೋಗಿ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ರಿಯಲ್ ಎಸ್ಟೇಟ್ ಮತ್ತು ಲೇವಾದೇವಿ ವ್ಯವಹಾರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆರೋಪಿಯು ಆರ್ಥಿಕವಾಗಿ ಚೆನ್ನಾಗಿರುತ್ತಾರೆ ಎಂದರೆ ಸರಿ. ನಾನು ಆರೋಪಿಯಿಂದ ಹಣ ಕಬಳಿಸುವ ಸಲುವಾಗಿ ನಿಪಿ.1 ಚೆಕ್ಕನ್ನು ತೆಗೆದುಕೊಂಡು ಹೋಗಿ ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಾಲವಾಗಿ ಹಣ ಪಡೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ಹಣ ನೀಡಬೇಕಾಗಿಲ್ಲ ಮತ್ತು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.